6. ಕೇಂದ್ರ ಪುರಸ್ಕೃತ ಸಾಂಬಾರು ಬೆಳೆಗಳಾದ ಮೆಣಸು, ಶುಂಠಿ, ಅರಿಶಿನ, ಮೆಣಸಿನಕಾಯಿ ಹಾಗೂ ವೆನಿಲ್ಲಾ ಬೆಳೆಗಳ ಪ್ರದೇಶ ವಿಸ್ತರಣೆ ಮತ್ತು ಇತರೆ ಸವಲತ್ತುಗಳನ್ನು ನೀಡಲಾಗುತ್ತಿದೆ.

7. ರಾಷ್ಟ್ರೀಯ ತೋಟಗಾರಿಕೆ ಮಂಡಳಿ ವತಿಯಿಂದ ರೈತರಿಗೆ ಗ್ರಾಮೀಣ ಪ್ರದೇಶದಲ್ಲಿ ಪೌಷ್ಟಿಕ ತೋಟಗಳನ್ನು ಸ್ಥಾಪಿಸಲು ಹಣ್ಣಿನ ಕಸಿಗಳನ್ನು ನೀಡಲಾಗುತ್ತಿದೆ.

8. ತೋಟಗಾರಿಕೆ ಬೆಳೆಗಳಲ್ಲಿ ಕೀಟ:ರೋಗಗಳ ಸಮಗ್ರ ನಿಯಂತ್ರಣಕ್ಕಾಗಿ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ನೀಡಲಾಗುತ್ತಿದೆ.

9. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ ಸಮಗ್ರ ಯೋಜನೆಯಡಿ ತೆಂಗು ಅಭಿವೃದ್ಧಿಪಡಿಸಲಾಗುತ್ತಿದೆ.

10. ಗಿರಿಜನ ಉಪಯೋಜನೆಯಡಿ ಗಿಡಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

11. ವಿಶೇಷ ಘಟಕ ಯೋಜನೆಯಡಿ ತೋಟಗಾರಿಕೆ ಗಿಡಗಳನ್ನು ನೀಡಲಾಗುತ್ತಿದೆ.(ಉಚಿತವಾಗಿ)

12. ಶೈತ್ಯಾಗಾರ ಸಹಾಯಧನ ಯೋಜನೆಯಡಿ ವಿದ್ಯುತ್‌ಚ್ಛಕ್ತಿಯ ಒಂದು ಯೂನಿಟ್‌ಗೆ ಒಂದು ರೂ.ನಂತೆ ಸಬ್ಸಿಡಿ ನೀಡಲಾಗುತ್ತಿದೆ.

ತುರುವೇಕೆರೆ ತಾಲ್ಲೂಕು ತುಯಲಹಳ್ಳಿ ಪಾಳ್ಯದಲ್ಲಿ ಅಂಗನವಾಡಿ ಕೇಂದ್ರ ಪ್ರಾರಂಭ.

734(579) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ತುಯಲಹಳ್ಳಿ ಪಾಳ್ಯದಲ್ಲಿ ಅಂಗನವಾಡಿ ಕೇಂದ್ರ ನಡೆಯುತ್ತಿದೆಯೇ?

ಆ) ತುಯಲಹಳ್ಳಿಯಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು?

ಇ) ಮಕ್ಕಳು ಜಾಸ್ತಿ ಇರುವ ಕಡೆ ಅಂಗನವಾಡಿ ಕೇಂದ್ರಗಳನ್ನು ನಡೆಸಬೇಕೆಂಬ ಸರ್ಕಾರದ ನೀತಿ ಇದೆಯೇ?

ಈ) ಹಾಗಿದ್ದಲ್ಲಿ, ಸರಿಯಾದ ವ್ಯವಸ್ಥೆಯಿಂದ ಇಲ್ಲಿ ಕೇಂದ್ರ ನಡೆಸಲಾಗುವುದೆ?

ಉ) ಮಕ್ಕಳ ಹಿತದೃಷ್ಟಿಯಿಂದ ಅಂಗನವಾಡಿ ಕೇಂದ್ರ ಇಲ್ಲಿ ಪ್ರಾರಂಭಿಸಲಾಗುವುದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ತುಯಲಹಳ್ಳಿಯಲ್ಲಿರುವ ಮಕ್ಕಳ ಸಂಖ್ಯೆ18.

ಇ) ಇದೆ.

ಈ) ತುಯಲಹಳ್ಳಿ ಪಾಳ್ಯದಲ್ಲಿ ಹೆಚ್ಚು ಫಲಾನುಭವಿಗಳು ಇರುತ್ತಾರೆ. ಆದರೆ ಅಂಗನವಾಡಿ ಕೇಂದ್ರಗಳು ಮಂಜೂರಾದಾಗ 18 ಮಕ್ಕಳು ಇರುವ ತುಯಲಹಳ್ಳಿಯಲ್ಲಿ ಕೇಂದ್ರ ಪ್ರಾರಂಭವಾಗಿರುತ್ತದೆ. ಈ ಕೇಂದ್ರವನ್ನು ಸ್ಥಳಾಂತರಿಸಲು ತಾಲ್ಲೂಕು ಪಂಚಾಯತಿಯ ಅನುಮತಿ ಕೋರಿದ್ದು, ಅನುಮತಿ ದೊರೆತ ನಂತರ ಹೆಚ್ಚು ಫಲಾನುಭವಿಗಳು ಇರುವ ತುಯಲಹಳ್ಳಿ ಪಾಳ್ಯದಲ್ಲಿ ಅಂಗನವಾಡಿ ಕೇಂದ್ರವನ್ನು ನಡೆಸಲಾಗುವುದು.

ಉ) ಅನುಮತಿ ದೊರೆತ ನಂತರ ತುಯಲಹಳ್ಳಿ ಪಾಳ್ಯಕ್ಕೆ ಅಂಗನವಾಡಿ ಕೇಂದ್ರವನ್ನು ಸ್ಥಳಾಂತರಿಸಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ಅಂಗವಿಕಲರಿಗೆ ಸೈಕಲ್ ವಿತರಣೆ

736(1309) ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ. (ಅಣ್ಣಯ್ಯ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆ ತಾಲ್ಲೂಕಿನಿಂದ ಎಷ್ಟು ಮಂದಿ ಅಂಗವಿಕಲರು ಮೂರು ಚಕ್ರದ ಸೈಕಲಿಗೆ ಅರ್ಜಿ ಹಾಕಿರುವರು?

ಆ) ಅವರಿಗೆ ಸರಕಾರ ಯಾವಾಗ ಸೈಕಲ್‌ಗಳನ್ನು ವಿತರಣೆ ಮಾಡುವುದು?

ಇ) ಎಷ್ಟು ಜನರಿಗೆ ಸೈಕಲ್‌ಗಳನ್ನು ಕೊಡಲು ಉದ್ದೇಶಿಸಲಾಗಿದೆ.

ಈ) ಬಾಕಿ ಉಳಿಯುವ ಅರ್ಜಿಗಳೆಷ್ಟು (ವಿವರ ನೀಡುವುದು)?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನಿಂದ 2001-02ನೇ ಸಾಲಿನಲ್ಲಿ 17 ಅಂಗವಿಕಲ ಅಭ್ಯರ್ಥಿಗಳು ಮೂರು ಚಕ್ರದ ಸೈಕಲಿಗೆ ಅರ್ಜಿ ಸಲ್ಲಿಸಿರುವರು.

ಆ) ಅವರಿಗೆ 25-3-02 ಹಾಗೂ 28-5-02 ರಂದು ಸೈಕಲ್‌ಗಳನ್ನು ವಿತರಣೆ ಮಾಡಲಾಗಿದೆ.

ಇ) 2002-03ನೇ ಸಾಲಿನಲ್ಲಿ ಇಲಾಖೆಯಿಂದ ತುರುವೇಕೆರೆ ತಾಲ್ಲೂಕಿನಲ್ಲಿ ಇಬ್ಬರು ಅಂಗವಿಕಲ ಫಲಾನುಭವಿಗಳಿಗೆ ತ್ರಿಚಕ್ರ ಸೈಕಲ್‌ಗಳನ್ನು ಕೊಡಲು ಉದ್ದೇಶಿಸಲಾಗಿದೆ.

ಈ) ಅನ್ವಯಿಸುವುದಿಲ್ಲ.

ವಿಶ್ವೇಶ್ವರ ನಾಲೆಯ ಆಧುನೀಕರಣ ಕಾಮಗಾರಿ ಗುತ್ತಿಗೆದಾರರಿಂದ ಹಣ ವಸೂಲಿ

737(1310) ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣರಾಜಸಾಗರ ನೀರಾವರಿ ಯೋಜನೆಯ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಕಾಮಗಾರಿಗೆ ನಿಗಧಿಪಡಿಸಿ ನೀಡಿದ್ದ ಗುತ್ತಿಗೆ ಮೊತ್ತವೆಷ್ಟು?

ಆ) ನಿಗಧಿಪಡಿಸಿದ್ದಕ್ಕಿಂತ ಹೆಚ್ಚಿಗೆ ಮೊತ್ತವನ್ನು ಈ ಕಾಮಗಾರಿಗಾಗಿ ನೀಡಲಾಗಿದೆಯೇ? ನೀಡಿದ್ದಲ್ಲಿ ಹೆಚ್ಚಿನ ಮೊತ್ತದ ಪ್ರಮಾಣವೆಷ್ಟು?